ಕ್ರ.ಸಂ.1.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರು ಮಂಡಿಸಿರುವ ನಿಯಮ-72ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.

ಪ್ರಶ್ನೆ:

ಸೆಪ್ಟೆಂಬರ್ ತಿಂಗಳಿನಲ್ಲಿ ತುಸು ಮಳೆ ಬಿದ್ದಿರುವುದು ಬರ ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ತಡೆದಿದೆ. ಆಗ ಒಂದೆರಡು ದಿನ ಮಳೆ ಬಂದು ಆಶಾದಾಯಕ ಎನ್ನುವಂಥ ವಾತಾವರಣ ಇದ್ದರೂ ಮುಂಗಾರಿನ ಮಳೆ ಕೊರತೆ ನೀಗಿಸಲು ಸಾಧ್ಯವಾಗಿಲ್ಲ. ಈಗಲೇ ತೀವ್ರತರವಾದ ಬೇಸಿಗೆಯ ವಾತಾವರಣ ಮೂಡಿದ್ದು, ಮುಂಬರುವ ಬೇಸಿಗೆ ಈಗಲೇ ಭೀತಿ ಮೂಡಿಸಿದೆ. ಕೋಲಾರದಲ್ಲಿ ಶೇ.11ರಷ್ಟು ಮಳೆ ಕೊರತೆ ಉಂಟಾಗಿದೆ. ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಸುಮಾರು 219.87 ಕೋಟಿ ನಷ್ಟವಾಗಿದೆ. ಒಟ್ಟು 35,974 ಹೆಕ್ಟೇರ್ ಕೃಷಿ ಪ್ರದೇಶದಲ್ಲಿ ನಾನಾ ಬೆಳೆ ಹಾನಿಯಾಗಿದೆ. ಕೃಷಿ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಈಗಾಗಲೇ ಜಿಲ್ಲೆಯ ಸಮೀಕ್ಷೆ ನಡೆಸಿ ಬೆಳೆ ಹಾನಿ ಹಾಗೂ ಅದರಿಂದ ಉಂಟಾಗಿರುವ ನಷ್ಟವನ್ನು ಅಂದಾಜು ಮಾಡಿದ್ದಾರೆ. ಈ ವಿಷಯವು ರೈತರ ಹಿತದೃಷ್ಟಿಯಿಂದ ಮಹತ್ವದಾಗಿರುವುದರಿಂದ ಮಾನ್ಯ ಕಂದಾಯ ಸಚಿವರ ಉತ್ತರ.

ಉತ್ತರ:

**2023ರ ಮಳೆ ವಿವರ:**

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದ್ಯಂತ ಸಾಮಾನ್ಯ ಮಳೆ 852 ಮಿ.ಮಿ. ಪ್ರತಿಯಾಗಿ ವಾಸ್ತವಿಕ ಸರಾಸರಿ ಮಳೆ 642 ಮಿ.ಮಿ. ಆಗಿದ್ದು, ಶೇ. 25 ರಷ್ಟು ಮಳೆ ಕೊರತೆ ಆಗಿರುತ್ತದೆ.

ಮಾಹೆವಾರು ನೈರುತ್ಯ ಮಾರುತ ಮಳೆಯ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಮಾಹೆ | ಸಾಮಾನ್ಯ (ಮಿ.ಮೀ.) | ವಾಸ್ತವಿಕ (ಮಿ.ಮೀ.) | % |
|---|---|---|---|---|
| 1 | ಜೂನ್ | 199 | 85 | -57 |
| 2 | ಜುಲೈ | 271 | 349 | 29 |
| 3 | ಆಗಸ್ಟ್ | 220 | 60 | -73 |
| 4 | ಸೆಪ್ಟೆಂಬರ್ | 161 | 145 | -10 |
| | **ನೈರುತ್ಯ ಮಾರುತ ಮಳೆ** | **852** | **642** | **-25** |

ಕೇಂದ್ರ ಸರ್ಕಾರದ ಬರ ಕೈಪಿಡಿ **-2023**ರಲ್ಲಿ ಸೂಚಿಸಿರುವ ಮಾನದಂಡಗಳ ಅನ್ವಯ **2023**ರ ಮುಂಗಾರು ಹಂಗಾಮಿನಲ್ಲಿ, ರಾಜ್ಯದ **236** ತಾಲ್ಲೂಕುಗಳ ಪೈಕಿ **223** ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಲಾಗಿದೆ.

ಕೋಲಾರ ಜಿಲ್ಲೆಯ **1.** ಬಂಗಾರ್‌ಪೇಟೆ **2.**ಕೋಲಾರ **3.** ಮಾಲೂರು **4.** ಮುಲಬಾಗಿಲು **5.** ಶ್ರೀನಿವಾಸಪುರ **6.** ಕೆ.ಜಿ.ಎಫ್ ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ.

**2023ರ ಬರದಿಂದ ಬೆಳೆಹಾನಿ:**

ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕಂದಾಯ, ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಜಂಟಿ ಸಮೀಕ್ಷೆ ವರದಿಯನ್ವಯ **46.11** ಲಕ್ಷ ಹೆಕ್ಟೇರ್ ಕೃಷಿ ಹಾಗೂ **2.06** ಲಕ್ಷ ಹೆಕ್ಟೇರ್ ತೋಟಗಾರಿಕೆ ಸೇರಿದಂತೆ ಒಟ್ಟು **48.17** ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದ್ದು, ಬೆಳೆ ಹಾನಿ ಇನ್‌ಪುಟ್ ಸಬ್ಸಿಡಿಗೆ **NDRF**

ಅಡಿಯಲ್ಲಿ ರೂ.**4663.12**ಕೋಟಿಗಳ ಆರ್ಥಿಕ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮೆಮೋರಾಂಡಂ ಸಲ್ಲಿಸಲಾಗಿದೆ.

ಬರ-ಪರಿಸ್ಥಿತಿಯ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರದಿಂದ NDRF ಅನುದಾನವನ್ನು ನಿರೀಕ್ಷಿಸಿ SDRF/NDRF ಮಾರ್ಗಸೂಚಿಗಳ ಪ್ರಕಾರ ಬೆಳೆ ಹಾನಿ ಪರಿಹಾರದ ಮೊದಲನೇ ಕಂತಾಗಿ / ಬೆಳೆ ಹಾನಿ ಪರಿಹಾರವಾಗಿ ಅರ್ಹತೆಯ ಅನುಗುಣವಾಗಿ ರೂ.2,000/- ರವರೆಗೆ ರೈತರಿಗೆ ಪಾವತಿಲು ತೀರ್ಮಾನಿಸಲಾಗಿದೆ.

**ಕೋಲಾರ ಜಿಲ್ಲೆಯ ಮಳೆ ವಿವರ:**

ಮುಂಗಾರು ಹಂಗಾಮಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಸಾಮಾನ್ಯ ಮಳೆ 399 ಮಿ.ಮಿ. ಪ್ರತಿಯಾಗಿ ವಾಸ್ತವಿಕ ಸರಾಸರಿ ಮಳೆ 355 ಮಿ.ಮಿ. ಆಗಿದ್ದು, ಶೇಕಡಾ 11 ರಷ್ಟು ಮಳೆ ಕೊರತೆ ಆಗಿರುತ್ತದೆ. ತಾಲ್ಲೂಕುವಾರು ಮಳೆಯ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ತಾಲ್ಲೂಕು | ನೈರುತ್ಯ ಮಾರುತದ ಮಳೆ-2023 (1ನೇ ಜೂನ್ ರಿಂದ 30ನೇ ಸೆಪ್ಟೆಂಬರ್ ರವರೆಗೆ) | | |
|---|---|---|---|---|
| | | ಸಾಮಾನ್ಯ | ವಾಸ್ತವಿಕ | % |
| 1 | ಬಂಗಾರಪೇಟೆ | 392.4 | 349.3 | -11 |
| 2 | ಕೋಲಾರ | 415.5 | 335.9 | -19 |
| 3 | ಮಾಲೂರು | 428.5 | 291.6 | -32 |
| 4 | ಮುಳಬಾಗಿಲು | 418.8 | 411.4 | -2 |
| 5 | ಶ್ರೀನಿವಾಸಪುರ | 410.6 | 389.7 | -5 |
| 6 | ಕೆ.ಜಿ.ಎಫ್. | 482.8 | 304.2 | -37 |

| ಕ್ರ.ಸಂ. | ಮಾಹೆ | ಸಾಮಾನ್ಯ (ಮಿ.ಮೀ.) | ವಾಸ್ತವಿಕ (ಮಿ.ಮೀ.) | % |
|---|---|---|---|---|
| 1 | ಜೂನ್ | 66 | 89 | 35 |
| 2 | ಜುಲೈ | 79 | 58 | -26 |
| 3 | ಆಗಸ್ಟ್ | 94 | 23 | -76 |
| 4 | ಸೆಪ್ಟೆಂಬರ್ | 160 | 187 | 16 |
| | **ನೈರುತ್ಯ ಮಾರುತ ಮಳೆ** | **399** | **355** | **-11** |

**ಕೋಲಾರ ಜಿಲ್ಲೆಯ ಬಿತ್ತನೆ ಹಾಗೂ ಬೆಳೆಹಾನಿ ವಿವರ:**

ಕೋಲಾರ ಜಿಲ್ಲೆಯಲ್ಲಿ 53592 ಹೆ. ಬಿತ್ತನೆಯಾಗಿದ್ದು, ಮಳೆಯ ಕೊರತೆಯಿಂದ 35974 ಹೆ. ರಷ್ಟು ಕೃಷಿ ಬೆಳೆಗಳು ಹಾನಿಯಾಗಿರುತ್ತದೆ.

| ಕ್ರ.ಸಂ | ತಾಲ್ಲೂಕು | ಬಿತ್ತನೆ ವಿಸ್ತೀರ್ಣ (ಹೆ.ಗಳಲ್ಲಿ) | ಬೆಳೆಹಾನಿ ವಿಸ್ತೀರ್ಣ (ಹೆ.ಗಳಲ್ಲಿ) |
|---|---|---|---|
| 1 | ಬಂಗಾರಪೇಟೆ | 10135.00 | 8104.00 |
| 2 | ಕೋಲಾರ | 14251.00 | 9245.00 |
| 3 | ಮಾಲೂರು | 9958.00 | 6745.00 |
| 4 | ಮುಳಬಾಗಿಲು | 8374.00 | 4842.00 |
| 5 | ಶ್ರೀನಿವಾಸಪುರ | 6624.00 | 3622.00 |
| 6 | ಕೆ.ಜಿ.ಎಫ್. | 4250.00 | 3416.00 |
| ಒಟ್ಟು | | 53592.00 | 35974.00 |

ಕೋಲಾರ ಜಿಲ್ಲೆಯಲ್ಲಿ ಹಾನಿಯಾದ ಬೆಳೆಗಳಿಗೆ ಸುಮಾರು ರೂ.219.37 ಕೋಟಿಗಳಷ್ಟು ನಷ್ಟವನ್ನು ಅಂದಾಜಿಸಲಾದೆ. ಎಸ್.ಡಿ.ಆರ್.ಎಫ್ ಮಾರ್ಗಸೂಚಿಯನ್ವಯ ಶೇ.33 ಗಿಂತ ಹೆಚ್ಚು ಹಾನಿಯಾದ ವಿಸ್ತೀರ್ಣಕ್ಕೆ ಪ್ರತಿ ಹೆಕ್ಟೇರ್‌ಗೆ ಮಳೆಯಾಶ್ರಿತ ಬೆಳೆಗಳಿಗೆ ರೂ.8,500/-ರಂತೆ, ನೀರಾವರಿ ಬೆಳೆ ಹಾನಿಗೆ ರೂ.17,000/- ಹಾಗೂ ಬಹುವಾರ್ಷಿಕ ಬೆಳೆಹಾನಿಗೆ ರೂ.22,500/- ರಂತೆ ಇನ್‌ಪುಟ್ ಸಬ್ಸಿಡಿಗಾಗಿ ಒಟ್ಟು 30.52 ಕೋಟಿ ಅಗತ್ಯವಿದೆ.

ರಾಜ್ಯದಲ್ಲಿ ಬರ-ಪರಿಸ್ಥಿತಿ ಇರುವುದರಿಂದ RBI ನಿರ್ದೇಶನದಂತೆ ರೈತರ ಬೆಳೆ ಸಾಲದ ಮರುಪಾವತಿ ಅವಧಿಯನ್ನು ಅಲ್ಪಾವಧಿಯಿಂದ ಮಧ್ಯಾವಾವಧಿ / ದೀರ್ಘಾವದಿಗೆ Re-structure ಮಾಡಲು SLBC ಗೆ ಸೂಚಿಸಲಾಗಿದೆ.

ಮುಂದಿನ ದಿನಗಳಲ್ಲಿ ಕುಡಿಯುವ ನೀರು ಪೂರೈಕೆ, ಗೋಶಾಲೆ & ಮೇವಿನ ಬ್ಯಾಂಕ್ ನಿರ್ವಹಣೆ ಇತರೆ ತುರ್ತು ಬರ ನಿರ್ವಹಣೆ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು 31 ಜಿಲ್ಲೆಗಳಿಗೆ ರೂ.324 ಕೋಟಿ ಗಳನ್ನು ದಿನಾಂಕ:31-10-2023ರಂದು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಆದೇಶದನುಸಾರ, ಕೋಲಾರ ಜಿಲ್ಲೆಗೆ ರೂ.9.00 ಕೋಟಿ ಅನುದಾವನ್ನು ಬಿಡುಗಡೆಗೊಳಿಸಲಾಗಿದೆ.

ಪಶು ಸಂಗೋಪನೆ ಇಲಾಖೆಯ ವರದಿಯನುಸಾರ ಕೋಲಾರ ಜಿಲ್ಲೆಯಲ್ಲಿ 2.23 ಲಕ್ಷ ಟನ್ ಮೇವು ಲಬ್ಯವಿದ್ದು, ಮುಂದಿನ 19 ವಾರಗಳಿಗೆ ಸಾಕಾಗುತ್ತದೆ. ಮುಂದಿನ ದಿನಗಳಲ್ಲಿ ಮೇವಿನ ಕೊರತೆ ಉಂಟಾಗದಂತೆ ಇಲಾಖೆಯ ಯೋಜನೆಗಳ ಮೂಲಕ ರೈತರಿಗೆ ಮೇವಿನ ಬೀಜ ವಿತರಿಸಿ, ಮೇವು ಬೆಳೆಸಲು, ಪ್ರೋತ್ಸಾಹಿಸಲು ಕ್ರಮ ಕೈಗೊಳ್ಳಲಾಗಿದೆ. SDRF ಅಡಿಯಲ್ಲಿ ಮೇವಿನ ಕಿರುಪೊಟ್ಟಣಗಳನ್ನು ನಿಯಮಾನುಸಾರ ಖರೀದಿಸಲು ರೂ.20.00 ಕೋಟಿ ಗಳನ್ನು ಪಶು ಸಂಗೋಪನೆ ಇಲಾಖೆಗೆ ಬಿಡುಗಡೆಗೊಳಿಸಲಾಗಿದೆ. ಪ್ರಸ್ತುತ ಕೋಲಾರ ಜಿಲ್ಲೆಯಲ್ಲಿ ಗೋಶಾಲೆ ಅಥವಾ ಮೇವಿನ ಬ್ಯಾಂಕ್ ತೆರೆಯುವಂತಹ ಪರಿಸ್ಥಿತಿ ಉದ್ಭವಿಸಿರುವುದಿಲ್ಲ.

ತಾಲ್ಲೂಕು ಮಟ್ಟದಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳ ಮೇವು ನಿರ್ವಹಣೆಗೆ ಹಾಗೂ ಬರ ಪರಿಹಾರ ಕ್ರಮಗಳ ಮೇಲ್ವಿಚಾರಣೆಗಾಗಿ ಮಾನ್ಯ ಶಾಸಕರ ನೇತೃತ್ವದಲ್ಲಿ ತಾಲ್ಲೂಕು ಮಟ್ಟದ ಟಾಸ್ಕ ಫೋರ್ಸ್ ರಚಿಸಲಾಗಿದೆ. ಸದರಿ ಕಾರ್ಯ ಪಡೆಯು ಕಾಲಕಾಲಕ್ಕೆ ಸಭೆಗಳನ್ನು ನಡೆಸಿ ಬರ ನಿರ್ವಹಣೆಯ ಪರಿಸ್ಥಿತಿಯನ್ನು ಪರಿಶೀಲಿಸಲು ಸೂಚನೆ ನೀಡಲಾಗಿದೆ. ಅದರಂತೆ, ಎಲ್ಲಾ ತಾಲ್ಲೂಕುಗಳಲ್ಲಿ ಸಭೆಗಳನ್ನು ನಡೆಸಲಾಗಿದೆ. ಪ್ರಸ್ತುತ 4 ಗ್ರಾಮಗಳಲ್ಲಿ ಖಾಸಗಿ ಬೋರ್‌ವೆಗಳನ್ನು ಬಾಡಿಗೆ ಆಧಾರದ ಮೇರೆಗೆ ಪಡೆದು ಕುಡಿಯುವ ನೀರು ಪೂರೈಸಲಾಗುತ್ತಿದೆ.

ಜಿಲ್ಲಾ ವಿಪತ್ತು ನಿರ್ವಹಣ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳು ದಿನಾಂಕ:14-8-2023, 7-11-1023 ಮತ್ತು 28-11-2023ರಂದು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಂದಿಗೆ ಬರ ಪರಿಸ್ಥಿತಿಯ ಸಭೆ ನಡೆಸಿದ್ದಾರೆ.

ದಿನಾಂಕ:27-11-2023 ರನ್ವಯ ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಒಟ್ಟು ರೂ.32.97ಕೋಟಿ ಹಾಗೂ ತಹಶೀಲ್ದಾರ್ ಪಿಡಿ ಖಾತೆಯಲ್ಲಿ ರೂ. 4.98 ಕೋಟಿ ಅನುದಾನವು ತುರ್ತು ಬರ ನಿರ್ವಹಣೆಗೆ ಅನುದಾನ ಲಭ್ಯವಿದೆ.

ಕಂಇ 564 ಟಿಎನ್‌ಆರ್ 2023

(ಕೃಷ್ಣ ಭೈರೇಗೌಡ)
ಕಂದಾಯ ಸಚಿವರು.